ಕವಿತೆ




## ಕಲ್ಲೇಶ್ ಕುಂಬಾರ್

ಕಲೆ: ಡಾ. ಸಿ. ರವೀಂದ್ರನಾಥ್




# ವಿಪರ್ಯಾಸ

ಕತ್ತಲು ಹೇಳುವಷ್ಟು ಕಥೆ
ಗಳನ್ನು ಬೆಳಕು ಎಂದೂ ಹೇಳುವುದಿಲ್ಲ:
ಅನುಗಾಲವೂ ಅಂತರಂಗದ ಪ್ರಾಂಗಣ
ದಲಿ ಬಿಡದೇ ಪ್ರವಿಸುವ ಗಾಢ ನಿಗೂಢ ಛಾಯೆ
ಗಳು ಕಥೆ ಕಟ್ಟುತ್ತವೆ ಇಲ್ಲಿ ಯಾವತ್ತೂ ಸಂಭವಿಸುವ
ಅನಂತ ಕ್ರಿಯೆಗಳಿಗೆ ಕತ್ತಲ ಕೋಣೆಯೊಳಗಿನ ಮಿಣುಕು ದೀಪ
ಸಾಕ್ಷಿಯಾಗಿದೆ ಹೀಗೆ ಕಣ್ಣ ಕೊಳದಲಿ ಯಾವತ್ತಿನ ನಕ್ಷತ್ರಗಳು ಮೂಡಿರಲು

ಕತ್ತಲಲ್ಲಿ ಬೆತ್ತಲಾಗುವುದೆಂದರೆ ಸುಮ್ಮನೇ ಅಲ್ಲ
ಸದಾ ಉಸುರಾಡುವ ಬೆಂಕಿಯಂತೆ ಜ್ವಲಿಸುವ ಥರಾವರಿ ರೇಖೆ
ಗಳನು ಎಳೆದೆಳೆದು ಚಿತ್ರಿಸಲು ಎದೆಯ ಗೋಡೆಯ ಮೇಲೆ ಮೈ
ಮನವನ್ನೆಲ್ಲ ತೆರೆದಿಡಬೇಕು, ಇರುಳು ತನ್ನ ತಾನೇ ಬೆಳಕಾಗಿಸಿಕೊಳ್ಳಲು:
ಅಸಾಧ್ಯವಾದ ಘೋರ ಸತ್ಯ
ವೊಂದು ದಶದಿಕ್ಕುಗಳನ್ನು ಅಲ್ಲೋಲಕಲ್ಲೋಲ ಗೊಳಿಸುವಂತೆ!

ಇಲ್ಲಿ ಏನೆಲ್ಲವೂ ಇರಲು ಬೆಳಕಿನಲಿ
ಏಕಾಂಗಿಯಾಗಿರಲು ಸಾಧ್ಯವಾಗದಿರುವುದು ಎಂಥ ವಿಪರ್ಯಾಸ? ನಿಷಿದ್ಧ ಕತ್ತಲಲ್ಲಿ
ಉದ್ದೀಪನಗೊಳ್ಳುವ ಆತ್ಮಗಳು
ವ್ಯೋಮ ಭೂಮಿಯ ತುಂಬ ಮನಸೋ ಇಚ್ಛೆ ಸುಳಿದಾಡುತ್ತವೆ:
ದಿನವೂ ಏಕಾಂತವನ್ನು ಸುಖಿಸುವುದಕ್ಕೂ ಅದೃಷ್ಟ ಬೇಕು



ಅಷ್ಟಕ್ಕೂ,
ಇಲ್ಲೆಲ್ಲ ಬೆಳಕು ಹರಿದು ಬೆಳಗುವಾಗ ಬೆನ್ನ ಹಿಂದಿನ ಕತ್ತಲು
ತನ್ನ ಪಾಡಿಗೆ ಶೂನ್ಯವನ್ನು ಬಣ್ಣದಲ್ಲಿ ಚಿತ್ರಿಸುತ್ತಿರುತ್ತದೆ ವಿನಾಕಾರಣ
ಯಾರ ಬದುಕೂ ಸಹ ಘಾಸಿಯಾಗದಂತೆ ಕಾಪಿಡುವ ಬಯಕೆ
ಕತ್ತಲೆಗೆ!


Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68